ಸಾಕ್ಷಿಯನ್ನು ದಿಃ 19.12.2023 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು

**ಮುಂದುವರಿದ ಮುಖ್ಯ ವಿಚಾರಣೆ ಃ ಸರಕಾರಿ ಅಭಿಯೋಜಕರವರಿಂದ ಃ**

15. ಚಾಸಾ 2, 3, 10 ಮತ್ತು 11 ಗೊತ್ತಿಲ್ಲ. ನಿಪಿ 2 ನ್ನು ಎಷ್ಟು ಗಂಟೆಯಿಂದ ಎಷ್ಟು ಗಂಟೆವರೆಗೆ ಮಾಡಿದ್ದಾರೆ ಹಾಗೂ ಅದಕ್ಕೆ ಯಾರು ಯಾರು ಸಹಿ ಮಾಡಿದ್ದಾರೆ ಎನ್ನುವುದು ಗೊತ್ತಿಲ್ಲ. ಪೊಲೀಸರು ನನ್ನ ಮುಂದುವರಿದ ಹೇಳಿಕೆಯನ್ನು ಎಷ್ಟು ಬಾರಿ ಮಾಡಿಕೊಂಡಿದ್ದಾರೆ , ಯಾವ ವಿಚಾರಕ್ಕೆ ಮಾಡಿಕೊಂಡಿದ್ದಾರೆ ಎನ್ನುವುದು ಗೊತ್ತಿಲ್ಲ. ನಿಪಿ 1

ರಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿತರೆಲ್ಲರೂ ನಮ್ಮ ಏರಿಯಾದಲ್ಲಿ ಇದ್ದಾರೆ.

16. ಈ ಹಂತದಲ್ಲಿ ಪಿಪಿ ಯವರ ವಿನಂತಿ ಮೇರೆಗೆ ಪಿಎಫ್ ಸಂಖ್ಯೆ 129/2022 ರಲ್ಲಿ ನಮೂದಿಸಿರುವ ಸೀಲಾದ ವಸ್ತು ಸಂಖ್ಯೆ 1 ಒಂದು ರಕ್ತಸಿಕ್ತ ಕಪ್ಪು ಬಣ್ಣದ ತುಂಬು ತೋಳಿನ ಶರ್ಟು , ವಸ್ತು ಸಂಖ್ಯೆ 2 ರಕ್ತಸಿಕ್ತ ನೀಲಿ ಬಣ್ಣದ ಜೀನ್ಸ ಪ್ಯಾಂಟ್ ಗಳನ್ನು ತೆರೆದ ನ್ಯಾಯಾಲಯದಲ್ಲಿ ಒಡೆದು ಸಾಕ್ಷಿಗೆ ತೋರಿಸಿ ಅವರು ಗುರುತಿಸಿದ ಮೇರೆಗೆ ವಸ್ತು ಸಂಖ್ಯೆ 1 ಮತ್ತು 2 ನ್ನು ಅನುಕ್ರಮವಾಗಿ ಮು.ಮಾ 1 ಮತ್ತು 2 ಎಂದು ಗುರುತಿಸಲಾಯಿತು.

(ಸರ್ಕಾರಿ ಅಬಿಯೋಜಕರವರು **ಭಾಗಶಃ** ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಸಾಕ್ಷಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಪರಶೀಲಿಸಿ ಅನುಮತಿ ನೀಡಲಾಯಿತು)

## ಪಾಟೀ ಸವಾಲು ಃ ಸರಕಾರಿ ಅಭಿಯೋಜಕರವರಿಂದ ಃ

17. ನಿಪಿ 1 ರಲ್ಲಿ ಬರೆದಿರುವ ವಿಚಾರವನ್ನು ಸಾಕ್ಷಿಗೆ ಓದಿ ಹೇಳಲಾಗಿ ಆ ರೀತಿ ದಿಃ 31.08.2022 ರಂದು ನಾನು ಪೊಲೀಸರಿಗೆ ಪಿರ್ಯಾದು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ದಿಃ 01.09.2022 ರಂದು ಪೊಲೀಸರು ಬೆಳಿಗ್ಗೆ 7.45 ರಿಂದ 8.45 ರವರೆಗೆ ಚಾಸಾ 2 ಮತ್ತು 3 ರವರ ಸಮಕ್ಷಮ ನಾನು ತೋರಿಸಿದ ಸ್ಥಳದಲ್ಲಿ ಸ್ಥಳ ಮಹಜರ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಿಃ 02.09.2022 ರಂದು ಮಧ್ಯಾಹ್ನ 3 ರಿಂದ 4 ಗಂಟೆ ಸಮಯದಲ್ಲಿ ಚಾಸಾ 10 ಮತ್ತು 11 ರವರ ಸಮಕ್ಷಮ ಪೊಲೀಸರು ಠಾಣೆಯಲ್ಲಿ ನಿಪಿ 2 ರಂತೆ ಅಮಾನತ್ತು ಪಂಚನಾಮೆಯನ್ನು ಮಾಡಿ ಮು.ಮಾ 1 ಮತ್ತು 2 ನ್ನು ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಈಗ ನನಗೆ ಓದಿ ಹೇಳಿದ ರೀತಿ ನನ್ನ ಮುಂದುವರಿದ ಹೇಳಿಕೆಯನ್ನು

ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ 9 ಎಂದು ಗುರುತಿಸಲಾಯಿತು.

18. ದಿಃ 03.09.2022 ರಂದು ನನಗೆ ಈಗ ಓದಿ ಹೇಳಿದ ರೀತಿ 1 ಮತ್ತು 2 ನೇ ಆರೋಪಿತರು ಹಾಜರುಪಡಿಸಿದಂತಹ ಚಾಕುಗಳಿಗೆ ಸಂಬಂದಿಸಿದಂತೆ ನನ್ನ ಮುಂದುವರಿದ ಹೇಳಿಕೆಯನ್ನು ಪೊಲೀಸರು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ 10 ಎಂದು ಗುರುತಿಸಲಾಯಿತು. ಸಾಕ್ಷಿ ಸ್ವತಃ ಚಾಕುವಿನ ಬಗ್ಗೆ ತನಗೇನೂ ಗೊತ್ತಿಲ್ಲವೆಂದು ಹೇಳುತ್ತಾರೆ.

19. ಈ ಪ್ರಕರಣದಲ್ಲಿ ನನಗೆ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ಹಾಗೂ ಆರೋಪಿತರು ವೆಂಕಟೇಶ ಅಲಿಯಾಸ್ ಕರಿಯನನ್ನು ಕೊಲೆ ಮಾಡಿದ್ದರೂ ಸಹ, ಆರೋಪಿತರಿಗೆ ಶಿಕ್ಷೆ ಆಗಬಾರದೆಂದು ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ ಆರೋಪಿತರ ಪರ ವಕೀಲರಿಂದ ಃ**

ಇಲ್ಲ ಎಂದು ಹೇಳಿರುತ್ತಾರೆ.

(ನನ್ನ ಉ ಮೇ ತೆ ನ್ಯಾ ಬೆ ಮಾಡಲಾಯಿತು)

ಓ ಹೇ ಕೇ ಸ ಇ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,

ಮೈಸೂರು